**CW : 10**

PW : 7

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.229/2023

ಸಾಕ್ಷಿದಾರರ ಹೆಸರು : ಎಸ್ ಗಣೇಶ್

ತಂದೆಯ ಹೆಸರು : ವಿಶ್ವನಾಥ ಆಚಾರ್ಯ

ಪ್ರಾಯ : 45 ವರ್ಷ

ಉದ್ಯೋಗ ಕಾರ್ಪೆಂಟರ್

ವಾಸಸ್ಥಳ : ಕುಕ್ಕೆ ಸುಬ್ರಹ್ಮಣ್ಯ

ದಿನಾಂಕ:**10.02.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿನ ತನ್ನ ಸಹಿಯನ್ನು ಗುರುತಿಸಿದ್ದು ಸದರಿ ದಾಖಲೆಯನ್ನು ನಿಪಿ.7 ಎಂದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.7 ಎ ಎಂದು ಗುರುತಿಸಲಾಯಿತು. ನಿಪಿ.7 ಕ್ಕೆ ನಾನು ಸುಮಾರು 1 ವರ್ಷದ ಹಿಂದೆ ಸಂಪ್ಯ ಬಸ್ ಸ್ಟ್ಯಾಂಡ್ ಹತ್ತಿರ ಸಹಿ ಮಾಡಿದ್ದೇನೆ. ನನ್ನ ಸಮಕ್ಷಮ ಪೊಲೀಸರು ಏನನ್ನೂ ಸ್ವಾದೀನಪಡಿಸಿಕೊಂಡಿಲ್ಲ. ನಿಪಿ-7 ರಲ್ಲಿ ಬರೆದಿರುವ ಅಂಶಗಳು ಗೊತ್ತಿಲ್ಲ.

ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿನ ತನ್ನ ಸಹಿಯನ್ನು ಗುರುತಿಸಿದ್ದು ಸದರಿ ದಾಖಲೆಯನ್ನು ನಿಪಿ.8 ಎಂದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.8ಎ ಎಂದು ಗುರುತಿಸಲಾಯಿತು. ನಿಪಿ.8 ಕ್ಕೆ ನಾನು ಸುಮಾರು 1 ವರ್ಷದ ಹಿಂದೆ ಸಂಪ್ಯ ಬಸ್ ನಿಲ್ದಾಣದ ಹತ್ತಿರ ಸಹಿ ಮಾಡಿದ್ದೇನೆ. ನಿಪಿ-8 ರಲ್ಲಿ ಬರೆದಿರುವ ಅಂಶಗಳು ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಮಹಜರು ಮಾಡಿ ಯಾವುದೇ ಸೊತ್ತನ್ನು ಬಿಡುಗಡೆ ಮಾಡಿಲ್ಲ, ನಿಪಿ-3 ರಲ್ಲಿ ಕಾಣುವ ಕಾರನ್ನು ನಾನು ಎಲ್ಲಿಯು ನೋಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು : ಅನುಮತಿ ನೀಡಲಾಯಿತು)

**ಪಾಟೀ ಸವಾಲು: ಸ.ಸ.ಅ. ರವರಿಂದ:**

**CW : 10**

PW : 7

ದಿ.16.11.22 ರಂದು ನಿಪಿ-3 ರಲ್ಲಿ ಕಾಣುವ ಕಾರನ್ನು ಅದರ ಮಾಲಿಕರಾದ ರಕ್ಷಿತ್ ಎನ್ನುವವರು ಸಂಪ್ಯ ಪೋ ಠಾಣೆಗೆ ತಂದು ಹಾಜರುಪಡಿಸಿದ್ದನ್ನು ಪೊಲಿಸೇರು ನನ್ನ ಸಮಕ್ಷಮ ನಿಪಿ-7 ರಂತೆ ಮಹಜರು ತಯಾರಿಸಿ ತಮ್ಮ ವಶಕ್ಕೆ ಪಡೆದಿರುತ್ತಾರೆ ಎಂದರೆ ಸುಳ್ಳು. ಆ ಸಮಯದಲ್ಲಿ ನಾನು ನಿಪಿ-7 ಕ್ಕೆ ಸಂಪ್ಯ ಪೋ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸುಳ್ಳು.

ದಿ.6-12-22 ರಂದು ನಿಪಿ-6 ರಲ್ಲಿರುವ ಕಾರನ್ನು ನ್ಯಾಯಾಲಯದ ಆದೇಶದಂತೆ ರಕ್ಷಿತ್ ರವರಿಗೆ ಬಿಡುಗಡೆ ಮಾಡುವ ಸಮಯ ಪೊಲೀಸರು ನಿಪಿ-8 ರಂತೆ ಮಹಜರನ್ನು ನನ್ನ ಸಮಕ್ಷಮ ಮಾಡಿರುತ್ತಾರೆ ಹಾಗೂ ನಾನು ಪೋ ಠಾಣೆಯಲ್ಲಿ ಹಾಜರಿದ್ದು ನಿಪಿ-8 ಕ್ಕೆ ಸಹಿ ಮಾಡಿದ್ದೇನೆ ಎಂದರೆ ಸುಳ್ಳು.

ಆರೋಪಿಗಳನ್ನು ಶಿಕ್ಷೆಯಿಂದ ರಕ್ಷಿಸುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃಆರೋಪಿತರ ಪರ ವಕೀಲರಿಂದಃ</u>

ಏನು ಇರುವುದಿಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.

**CW : 10**

PW : 7